# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 400 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 10.12.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಇದುವರೆಗೂ ಪೂರ್ಣಗೊಂಡಿರುವ ಪೋಡಿ ಮುಕ್ತ ಗ್ರಾಮಗಳ ಸಂಖ್ಯೆ ಎಷ್ಟು: | ರಾಜ್ಯದಲ್ಲಿ ಇದುವರೆಗೂ ಒಟ್ಟು **19,635** ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳ ಅಭಿಯಾನದಡಿ ಆಯ್ಕೆ ಮಾಡಿಕೊಂಡು ಅಳತೆ ಕಾರ್ಯ ಪೂರೈಸಲಾಗಿದೆ. |
| (ಆ) | ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮ ಎಂದು ಘೋಷಿಸಲಾಗಿದೆ: ಬಾಕಿಯಿರುವ ಗ್ರಾಮಗಳ ಸಂಖ್ಯೆ ಎಷ್ಟು: | ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪೋಡಿ ಮುಕ್ತ ಗ್ರಾಮ ಎಂದು ಘೋಷಿಸಿರುವ ಮತ್ತು ಬಾಕಿಯಿರುವ ಗ್ರಾಮಗಳ ವಿವರ ಈ ಕೆಳಕಂಡಂತಿದೆ: (see table below) |
| (ಇ) | ಬಾಕಿಯಿರುವ ಗ್ರಾಮಗಳಲ್ಲಿ ರೈತರು ಅರ್ಜಿ ಸಲ್ಲಿಸಿದ್ದರೂ ಸಹ ಪೋಡಿ ಕಾರ್ಯಗಳನ್ನು ಕೈಗೊಳ್ಳದೇ ಇರುವುದಕ್ಕೆ ಕಾರಣಗಳೇನು: | ಪೋಡಿ ಮುಕ್ತ ಗ್ರಾಮ ಯೋಜನೆಯಲ್ಲಿ ಪೋಡಿಗಾಗಿ ರೈತರು ಯಾವುದೇ ಅರ್ಜಿ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ.<br><br>ಆದ್ಯತೆಯನುಸಾರ ಇಲಾಖೆಯು ಸ್ವಯಂ ಪ್ರೇರಿತವಾಗಿ ಹಂತಹಂತವಾಗಿ ಬಹುಮಾಲಿಕತ್ವದ ಪಹಣಿಗಳಿರುವ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಪೋಡಿ ಮಾಡಲಾಗುತ್ತಿದೆ.<br><br>ಒಂದು ವೇಳೆ ಪೋಡಿ ಮುಕ್ತ ಗ್ರಾಮ ಯೋಜನೆಗೆ ಆಯ್ಕೆಯಾಗದೆ ಇರುವ ಗ್ರಾಮಗಳಲ್ಲಿ ರೈತರಿಂದ ಯಾವುದೇ ರೀತಿಯ ಅಳತೆ ಕೋರಿ ಅರ್ಜಿ ಸ್ವೀಕೃತವಾಗಿದಲ್ಲಿ ಬಾಕಿ ಉಳಿಯಲು ಕಾರಣಗಳು ನ್ಯಾಯಾಲಯದ ಪ್ರಕರಣಗಳು, ತಕರಾರು ಪ್ರಕರಣಗಳ, ಗಡಿ ವಿವಾದಗಳು ಆಗಿರುತ್ತವೆ. |

| ಕ್ರ. ಸಂ. | ಜಿಲ್ಲೆ | ಅಳತೆ ಕಾರ್ಯ ಪೂರ್ಣ ಗೊಂಡಿರುವ ಗ್ರಾಮಗಳ ಸಂಖ್ಯೆ | ಅಳತೆ ಕಾರ್ಯ ಬಾಕಿ ಇರುವ ಗ್ರಾಮಗಳ ಸಂಖ್ಯೆ |
|---|---|---|---|
| 1 | ತುಮಕೂರು | 1881 | 851 |
| 2 | ಚಿತ್ರದುರ್ಗ | 798 | 269 |
| 3 | ದಾವಣಗೆರೆ | 829 | 030 |

| | | |
|---|---|---|
| ಈ) | ಈ ಜಿಲ್ಲೆಗಳಲ್ಲಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸಲು ಸಮಯ ನಿಗಧಿಪಡಿಸಲಾಗಿದೆಯೇ: ನಿಗಧಿತ ಸಮಯದಲ್ಲಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮಗಳೇನು? | ರಾಜ್ಯದಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸಲು ಯಾವುದೇ ಸಮಯ (ಕಾಲಮಿತಿ) ನಿಗಧಿಪಡಿಸಿರುವುದಿಲ್ಲ.<br><br>ಪ್ರಥಮ ಆದ್ಯತೆಯಾಗಿ, ಸಾರ್ವಜನಿಕರು ಶುಲ್ಕ ಪಾವತಿಸಿ ಸಲ್ಲಿಸುವ 11ಇ, ತತ್ಕಾಲ್ ಪೋಡಿ, ಹದ್ದುಬಸ್ತು, ಇ ಸ್ವತ್ತು ಹಾಗೂ ದರಖಾಸ್ತು ಪೋಡಿ ಪ್ರಕರಣಗಳು, ಭೂಸುಧಾರಣಾ ಪೋಡಿ ಪ್ರಕರಣಗಳು, ಭೂಪರಿವರ್ತಾನಾ ಪೋಡಿ ಪ್ರಕರಣಗಳು, ನ್ಯಾಯಾಲಯದ ಪ್ರಕರಣಗಳು, ಕೆರೆ, ಅರಣ್ಯ ಇತ್ಯಾದಿ ಸಾರ್ವಜನಿಕ ಹಿತಾಸಕ್ತಿಯ ಪ್ರಕರಣಗಳನ್ನು ಅಳತೆ ಮಾಡಲಾಗುತ್ತಿದೆ.<br><br>ಸದರಿ ಪ್ರಕರಣಗಳು ಹೆಚ್ಚಿಗೆ ಇಲ್ಲದಿದ್ದಲ್ಲಿ ಆದ್ಯತೆ ಮೇರೆಗೆ ಪೋಡಿ ಮುಕ್ತ ಗ್ರಾಮ ಅಭಿಯಾನದಡಿಯಲ್ಲಿ ಗ್ರಾಮಗಳನ್ನು ಹಂತ ಹಂತವಾಗಿ ಆಯ್ಕೆ ಮಾಡಿಕೊಂಡು ಅಳತೆ ಕಾರ್ಯ ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

<u>ಸಂಖ್ಯೆ: ಕಂಇ **207** ಎಸ್ ಎಸ್ ಸಿ **2025**</u>

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು